ಮುರಲೀಧರ ಕುಲಕರ್ಣಿ, ಬೀದರ್
*ಬೇರೆಯವರ ಭವಿಷ್ಯ ಹೇಳುವ ಜ್ಯೋತಿಷಿಗಳಿಗೆ ತಮ್ಮ ಭವಿಷ್ಯ ತಿಳಿದಿರುತ್ತದೆಯೆ?*



ಭವಿಷ್ಯ ಕೇಳುವವರು ಬರದಿದ್ದರೆ ತಮಗೆ ಭವಿಷ್ಯವಿಲ್ಲವೆಂಬ ಭವಿಷ್ಯ ಮಾತ್ರ ತಿಳಿದಿರುತ್ತದೆ.

ಎಂ.ಎ. ಕುಮಾರ್, ಬೆಂಗಳೂರು
*ಸಂಬಂಧಗಳಲ್ಲಿ ಅತಿ ಗಟ್ಟಿ ಸಂಬಂಧ ಯಾವುದು?*
sum ಇಲ್ಲದಿದ್ದರೂ ಉಳಿಯುವ ಬಂಧ.

ವಿ. ಹೇಮಂತಕುಮಾರ್, ಬೆಂಗಳೂರು
*ಚೆಲುವೆಯೊಬ್ಬಳನ್ನು ಕಂಡಾಗಿನಿಂದ ಹೊಸ ತರಹದ ನೋವು ಉಂಟಾಗಿದೆಯಲ್ಲ...?*
ಓ! ಇದೇ ಮೊದಲ ಕಪಾಳಮೋಕ್ಷ ಅನ್ನಿ!

ಬೋ.ಪಾ. ವೆಂಕಟೇಶ್, ಹೊಸಕೋಟೆ
*ಮನುಷ್ಯನಿಗೆ ಹನುಮಂತನಂತೆ ಬಾಲವಿದ್ದಿದ್ದರೆ ಹೇಗಿರುತ್ತಿತ್ತು?*
ಅಂಗಡಿಯವರೆಗೆ ಪಾದ ಬೆಳೆಸುವ ಬದಲು ಬಾಲ ಬೆಳೆಸಬಹುದಾಗಿತ್ತು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಬೆಳಗಿನ ಜಾವದಲ್ಲಿ ಕೋಳಿಹುಂಜಗಳು ಮಾತ್ರ ಕೂಗುತ್ತವೆ. ಹೆಣ್ಣುಕೋಳಿಗಳು ಏಕೆ ಕೂಗುವುದಿಲ್ಲ?*



ಕೂಗಿದರೆ ಹುಂಜ ಹುಳು ಹೆಕ್ಕೋ ಕೆಲಸ ಬಿಟ್ಟು ಮತ್ತೆ ಡ್ಯುಯೆಟ್ ಹಾಡಕ್ಕೆ ಬಂದ್ಬಿಡತ್ತೇಂತ.

ಬಾಲಕೃಷ್ಣ ಕತ್ತಲತಾರ್, ಮಂಗಳೂರು
*ಮಠ, ಮಡಿ ಮೌಢ್ಯ. ಏನಂತೀರಿ?*
ಮಡಿ ಎಂದರೆ ಶುಚಿ; ಮಠ ಸದಾಚಾರದ ನೆಲೆ. ಇದರ ಹೊರತಾದುದು ಮೌಢ್ಯ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ವೈಕುಂಠ ಸಮಾರಾಧನೆಯ ದಿನ ಸ್ವರ್ಗಕ್ಕೆ ನೇರ ದಾರಿ ಇದೆಯಂತೆ. ಏಕೆ?*
ನಿಶ್ಶಕ್ತರಾದರೂ ನಿಟ್ಟುಪವಾಸ ಮಾಡಿ ಬಳಲಿದವರಿಗೆ ಬಳಸುದಾರಿ ಬೇಡವೆಂದು ನೇರದಾರಿ ಕಲ್ಪಿಸಲಾಗುವುದಂತೆ.

ಎಂ. ಸುರೇಶ್, ಕಲ್ಲಡ್ಕ
*ಮರುಭೂಮಿಗೂ, ಓಯಸಿಸ್‌ಗೂ ವ್ಯತ್ಯಾಸವೇನು?*
ಮರುಭೂಮಿ ಹಲಸಿನಹಣ್ಣು; ಓಯಸಿಸ್ ಹಲಸಿನ ತೊಳೆ.

ಎಂ.ಎನ್. ಸೋಮಶೇಖರ್, ಮೈಸೂರು
*ರಾಜಕೀಯಕ್ಕೆ ಸೇರಲು ಮಾನದಂಡವೇನು?*
ಹೌದು. ಮಾನ ದಂಡವೇ.

ದ್ವಾರಕಾನಾಥ್, ಬೆಂಗಳೂರು
*'ಶಾಸ್ತ್ರೀ'ಯ ಸಂಗೀತವಿದೆ. ನೆಹರೂ ಸಂಗೀತವೇಕಿಲ್ಲ?*
ನೆಹರೂ ಆಕಾಶದತ್ತ ದೃಷ್ಟಿ ನೆಟ್ಟವರು. ಆದ್ದರಿಂದ ಅವರದು ಸಂಗೀತವಲ್ಲ, ತಾರಾಲಯ.

ಸುಂದರ್, ಬೆಂಗಳೂರು
*ಒಂದ್ಹೊತ್ತುಂಡವ್ನ ಯೋಗಿ; ಎರಡ್ಹೊತ್ತುಂಡವ್ನ ಭೋಗಿ; ಮೂರ್ಹೊತ್ತುಂಡವ್ನ ರೋಗಿ; ಯಾವಾಗಲೂ ಲಂಚ ಉಣ್ಣೋವ್ನು?*
ಮೃದ್ವಂಗಿ!

ವೈ.ಎನ್. ಸುಂದರೇಶನ್, ಮೈಸೂರು
*ಇತ್ತೀಚೆಗೆ ವಿದೇಶದ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿ ಭಾರತಕ್ಕೆ ಬರಲು ಕಾರಣವೇನು ರಾಮ್?*
ಹದಿಹರೆಯದವರೇ; ಪಿಝ್ಝಾ, ಬರ್ಗರ್, ಪೈ, ಫ್ರೈ, ಪಾಸ್ತಾಗಳಿಗೆ ಐಚ್ಛಿಕವಾಗಿ ಬಲಿಯಾಗುವವರು ಅವರೇ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
*'ಲೊಳಲೊಳಲೊಳಾಯಿ....' ಜೋಗುಳದ ಅರ್ಥವೇನು?*
ಅಮ್ಮನಿಗೆ ಅರ್ಜೆಂಟ್ ಕೆಲಸವಿದೆ, ಮಗು ಕೈಬಿಡುತ್ತಿಲ್ಲ ಎಂದು.

ಅಮರಯ್ಯಾ ಪತ್ರಿಮಠ, ಸುರಪೂರ
*ಮರ್ಕಟ ಮನಸ್ಸನ್ನು ಬಂಧಿಸುವುದು ಹೇಗೆ?*
ಸದ್ವಿಚಾರದ ಬೇಡಿ ತೊಡಿಸಿ ಅಧ್ಯಯನದ ಸೆರೆಮನೆಗೆ ತಳ್ಳಿಬಿಡಿ.

## ಬಹುಮಾನಿತ ಪ್ರಶ್ನೆ

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಹಗ್ಗ ತಯಾರಿಕೆ ನಿಷೇಧ ಮಾಡಿದರೆ ನೇಣುಹಾಕಿಕೊಳ್ಳುವುದು ನಿಲ್ಲಬಹುದಲ್ಲವೆ?*
ನಿಷೇಧ ಅಗತ್ಯವಿಲ್ಲ. ಹಗ್ಗದ ಗುಣಮಟ್ಟ ಕಡಿಮೆ ಮಾಡಿಬಿಡಿ. 25 ಕೆ.ಜಿ. ಭಾರ ಜಗ್ಗಿದಾಕ್ಷಣ ಹಗ್ಗ ತುಂಡಾಗಿ ಆದ್ಮಿ ಬಚಾವ್!

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ಉಗ್ರರು ನಿಮ್ಮನ್ನು ಕಿಡ್ನಾಪ್ ಮಾಡಿದರೆ ಪ್ರಶ್ನೆ ಕೇಳುವ ನಮ್ಮಂತಹವರಿಗೆ ಉತ್ತರಿಸುವವರು ಯಾರು?*
ನಾನೇ. 'ಕನ್ನಡದ ಸಾಹಿತಿ' ಎಂದಾಕ್ಷಣ ಮೂರುಕಾಸೂ ಗಿಟ್ಟುವುದಿಲ್ಲವೆಂದು ತಿಳಿದು ಉಗ್ರರೇ ಓಡಿಸಿಬಿಡುವರಲ್ಲ!

ಎಚ್.ಆರ್. ದೇಸಾಯಿ, ರಾಯಚೂರು
*ಚಹಾ/ಕಾಫಿ ಬಿಸಿಯದ್ದೇ ಏಕೆ ಕುಡಿಯುತ್ತಾರೆ?*



ವಜ್ರವನ್ನು ವಜ್ರದಿಂದಲೇ ಕತ್ತರಿಸಬೇಕು; (ತಲೆ)ಬಿಸಿಯನ್ನು (ಚಹಾ/ಕಾಫಿ)ಬಿಸಿಯಿಂದಲೇ ಓಡಿಸಬೇಕು.

ಪಿ. ಚಿದಾನಂದ, ಜವನಗೊಂಡನಹಳ್ಳಿ
*ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ಹಣದಿಂದ ಅಳೆಯುತ್ತಾರಲ್ಲ, ಇದಕ್ಕೆ ಕೊನೆ ಎಂದು?*
ಹಣ ಬೆಲೆ ಕಳೆದುಕೊಂಡಂದು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ದೇವರು ನಿಜವಾಗಿ ನೈವೇದ್ಯ ತಿನ್ನುವಂತಾಗಿದ್ದರೆ ಏನಾಗುತ್ತಿತ್ತು ಸಾರ್?*
ಉದರಶೂಲೆ ಹೋಗಿಸಲು ದೇವನೇ ಧನ್ವಂತರಿ ಜಪ ಮಾಡಬೇಕಾಗುತ್ತಿತ್ತು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಗುಲಾಬಿ ತೋಟದಲಿ ಪ್ರಿಯತಮೆಯ ನೋಟದಲಿ ಮಗ್ನನಾಗಿರುವವನಿಗೆ ಪ್ರಪಂಚದ ಪರಿವೆ ಇರಲ್ಲವಂತೆ, ಹೌದಾ?*
ಹಾಗೇನಿಲ್ಲ; ಕಾವಲುಪೇದೆಯ/ತೋಟದ ಮಾಲಿಯ ವಸೂಲಾತಿಯ ಮುಳ್ಳು ಆಗಾಗ್ಗೆ ಚುಚ್ಚಿ ಎಚ್ಚರಿಸುತ್ತದೆ.

■ ರಾಮ್